(ಸಭೆಯು ಬೆಳಿಗ್ಗೆ 9. 40ಕ್ಕೆ ಸಮಾವೇಶಗೊಂಡಿತು, ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ .

(ಅ) ವಿದ್ಯುತ್ ದರದಲ್ಲಿ ಶೇಕಡ 43 ರಷ್ಟು ಹೆಚ್ಚಳ.

★ **ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದು ಒಂದು ವಿಶೇಷವಾದ ಸಂದರ್ಭವೆಂದು ಹೇಳಿ ತಾವು ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ವಿದ್ಯುತ್ ದರವನ್ನು ಶೇ. 43ರಷ್ಟು ಏರಿಕೆ ಮಾಡಿದ್ದಾರೆ. ಅದು ರಾಜ್ಯದ ಎಲ್ಲಾ ಸಮೂಹದ ಮೇಲೂ ಮತ್ತು ಜನಾಂಗದ ಮೇಲೂ ದುಷ್ಪರಿಣಾಮ ಬೀರಿದೆ. ತಮಗೆ ಗೊತ್ತಿರುವ ಹಾಗೆ ಕರ್ನಾಟಕ ಬಂದ್‌ಗೆ ಎಲ್ಲರ್ ಸಹಜವಾಗಿಯೇ ತಮ್ಮ ಬೆಂಬಲವನ್ನು ಕೊಟ್ಟರು. ಸರ್ಕಾರದವರು ಸಹ ಇದರ ಬಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಉತ್ತರವನ್ನು ಕೊಡುವುದಕ್ಕೆ ಮುಂಚೆ ಪ್ರಶ್ನೋತ್ತರಕ್ಕೆ ಎಲ್ಲಾ ವಲಯದ ಮಟ್ಟದಲ್ಲಿ ಎಲ್ಲಾ ರಂಗದ ಮಟ್ಟದಲ್ಲಿ ಎಲ್ಲರ ಮೇಲೂ ದುಷ್ಪರಿಣಾಮವಾಗುವಂತಹ ವಿದ್ಯುತ್ ದರ ಏರಿಕೆ ಏನೂ ಅಚಾತುರ್ಯದಿಂದ ಏರಿಕೆಯಾಗಿರಬಹುದು. ಸರ್ಕಾರ ಯಾವ ಇಕ್ಕಟ್ಟಿಗೆ ಸಿಕ್ಕಿರಬಹುದು ಎಂಬದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾದರೆ ರಾಜ್ಯದ ಜನತೆಗೆ ಸಹ ನಿಜಾಂಶ ಏನೆಂದು ಅದಕ್ಕೋಸ್ಕರ ತಾವು ನಿಯಮಾವಳಿಯ ಪ್ರಕಾರ ಅಪ್ಪಣೆ ಕೊಟ್ಟರೆ ಮತ್ತು ಮಾನ್ಯ ಸಭಾನಾಯಕರು ಒಪ್ಪಿದರೆ ಇದು ಪ್ರಮುಖವಾದ ವಿಷಯ ಮತ್ತು ಗಂಭೀರವಾದಂತಹ ವಿಚಾರವಾಗಿರುವುದರಿಂದ ನಾವು ಚರ್ಚೆ ಮಾಡಬಹುದು. ಅನೇಕ ದಿವಸಗಳ ನಂತರ ನಾವು ಈ ಶಾಸನಸಭೆಯಲ್ಲಿ ಸೇರುತ್ತಿದ್ದೇವೆ. ರಾಜ್ಯದ ಜನತೆಗೆ ದುಷ್ಪರಿಣಾಮವಾಗಿದೆ, ಉಸಿರು ಕಟ್ಟುವಂತಹ ಪರಿಸ್ಥಿತಿ ನಿರ್ಮಾಣವಾಗದೆ. ಕಳೆದ 15 ದಿವಸಗಳಿಂದ ಮಳೆಯೂ ಇಲ್ಲ, ರೈತರು ಮಾಡಿರುವಂತಹ ಬಿತ್ತನೆಯೂ ಸಹ ಹಾಳಾಗುತ್ತಿದೆ. ಪರಿಸ್ಥಿತಿ ತುಂಬಾ ಹಾಳಾಗಿರುವಂತಹ ಕಾಲದಲ್ಲಿ ದರ ಜಾಸ್ತಿಯಾಗಿದೆ. ಪೆಟ್ರೋಲಿಯಂ ಬೆಲೆ ಜಾಸ್ತಿಯಾಗಿದೆ ಇಂತಹ ಒಂದು ಸಂದರ್ಭದಲ್ಲಿ ಬೆಲೆ ಏರಿಕೆ ಏನು ಆಗಿದೆ ಇದರ ಬಗ್ಗೆ ಚರ್ಚೆ ಆಗುವಂಥಾದ್ದು ತುಂಬಾ ಅಗತ್ಯವಿದೆ. ಆದುದರಿಂದ ನಾನು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಸಭಾನಾಯಕರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ಇದು ಒಂದು ವಿಶೇಷ ಸಂದರ್ಭವೆಂದು ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ವಿದ್ಯುತ್ ದರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿ ಕೋರುತ್ತೇನೆ. ನಾವು ಈ ವಿಷಯವಾಗಿ ನಿಲುವಳಿ ಸೂಚನೆಯನ್ನು ಕೊಟ್ಟಿದೇವೆ. ತಾವು ಅದನ್ನು ಮಾಡದಿದ್ದರೆ ಜನರು ಮುಂದೆ ನಮ್ಮನ್ನು ದೊಡ್ಡ ಅಪರಾಧಿಯ ಸ್ಥಾನದಲ್ಲಿ ನೋಡಬಹುದು. ಅವರು ನಮ್ಮನ್ನು ಕ್ಷಮಿಸುವುದಿಲ್ಲ. ಆದುದರಿಂದ ತಾವು ಕರ್ತವ್ಯದ ದೃಷ್ಟಿಯಿಂದ ನಮಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ನಾವು ಯಾರ ಮೇಲೂ ವೈಯಕ್ತಿವಾಗಿ ಆರೋಪಣೆಯನ್ನು ಮಾಡುತ್ತಿಲ್ಲ. ಇವತ್ತು ಶಾಸನ ಸಭೆ 4ನೇ ತಾರೀಖು ಇರುವಾಗ ಶಾಸನ ಸಭೆಯ ಮುಂಚಿತವಾಗಿಯೆ ವಿದ್ಯುಚ್ಛಕ್ತಿ ದರವನ್ನು ಯದ್ವಾತದ್ವಾ ಏರಿಸಿ....

2) ಮಂತ್ರಿ ಮಂಡಲದ ಸಚಿವರ ಪರಿಚಯ ಕುರಿತು

★ **ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-** ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಈ ಸರ್ಕಾರ ಅಸ್ತಿತ್ವದಲ್ಲಿದೆ ಎಂದು ತಿಳಿದು ಚರ್ಚೆ ಮಾಡುತ್ತಿದ್ದೇನೆ. ಕಾರಣವಿಷ್ಟೆ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾದ ಮೇಲೆ ಇದು ಮೊದಲನೇ ಸಲ ನಾವು ಸಭೆಯನ್ನು ಸೇರುತ್ತಿದ್ದೇವೆ. ನಮ್ಮ ಕನ್‌ವೆನ್‌ಶನ್ ಪ್ರಕಾರ ಪಾರ್ಲಿಮೆಂಟಿನಲ್ಲಾಗಲಿ, ಅಸೆಂಬ್ಲಿಯಲ್ಲಾಗಲಿ ಹೊಸ ಮುಖ್ಯ ಮಂತ್ರಿಗಳು ಬಂದ ಮೇಲೆ ಪ್ರಥಮಬಾರಿಗೆ ತಮ್ಮ ಕ್ಯಾಬಿನೇಟ್ ಮಂತ್ರಿಗಳನ್ನು ಇಂಟ್ರಡ್ಯೂಸ್ ಮಾಡುತ್ತಾರೆ. ಕ್ಯಾಬಿನೇಟ್‌ನಲ್ಲಿ ಯಾವ ಮಂತ್ರಿಗಳು ಇದ್ದಾರೆ. ಯಾವ ಖಾತೆಯನ್ನು ಹೊಂದಿದ್ದಾರೆ. ಎಷ್ಟು ಜನರು ಮಂತ್ರಿಗಳು ಇದ್ದಾರೆಂಬುದನ್ನು ಹೇಳಿದ ಮೇಲೆ ಉಳಿದ ಕೆಲಸಗಳು ಪ್ರಾರಂಭವಾಗುತ್ತವೆ. ಇದು ಇದುವರೆಗೂ ನಡೆದುಕೊಂಡು ಬಂದಂತಹ ಪದ್ಧತಿಯಾಗಿದೆ. ಇದು ಪಾರ್ಲಿಮೆಂಟ್‌ನಲ್ಲಿ ಮತ್ತು ಅಸೆಂಬ್ಲಿಯಲ್ಲೂ ಇದೆ. ಈಗ ದಿಢೀರನೆ ಚರ್ಚೆ ಪ್ರಾರಂಭ ಮಾಡಿದರೆ ನಮಗೆ ಗೊತ್ತಾಗಬೇಕಲ್ಲಾ, ಎಷ್ಟು ಜನ ಮಂತ್ರಿಗಳು ಇದ್ದಾರೆ, ಅವರ ಅಂಕಿಸಂಖ್ಯೆಗಳು ಏನು ಎಂಬುದು ನಮಗೆ ಗೊತ್ತಾದರೆ ಅವರವರಿಗೆ ಸಂಬಂಧಪಟ್ಟಂತೆ ನಮಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಾಗುತ್ತದೆ, ಅವರವರ ಇತಿಮಿತಿ ಕೂಡ ಗೊತ್ತಾಗುತ್ತದೆ. ಆದುದರಿಂದ ದಯ ಮಾಡಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಕ್ಯಾಬಿನೆಟ್ ಅನ್ನು ಇಂಟ್ರಡ್ಯೂಸ್ ಮಾಡಬೇಕು. ನಿನ್ನೆ ಸಂತಾಪ ಸೂಚನೆ ಇತ್ತು ಎಂದು ನಾವು ಕೇಳಲಿಲ್ಲ. ಆದುದರಿಂದ ಇವತ್ತಿನ ದಿವಸ ಅವರ ಕ್ಯಾಬಿನೆಟ್ ಅನ್ನು ಇಂಟರ್‌ಡ್ಯೂಸ್ ಮಾಡದೆ ಹೋದರೆ ಅವರ ಹೆಸರುಗಳು, ಖಾತೆಗಳು, ಇಂತವರು ಹೊಂದಿದ್ದಾರೆಂದು ಹೇಳದೆ ಹೋದರೆ ಏನು ಸ್ಟ್ಯಾಂಡರ್ಡ್ ಇಲ್ಲ. ಮತ್ತೆ ಇದು ಇಲ್ಲಿಯವರೆಗೆ ನಡೆದುಕೊಂಡು ಬಂದ ಪ್ರಿಸಿಕೆಂಟ್ಸ್ ಏನು ಇದೆ. ಆದಕ್ಕೆ ನೀವು ತಿಲಾಂಜಲ್ಲಿ ಕೊಟ್ಟಂತೆ ಆಗುತ್ತದೆ. ಇದುವರೆಗೂ ಈ ರೀತಿಯಾಗಿ ಎಲ್ಲೂ ಆಗಿಲ್ಲ. ಅವರೂ ಸಹ ಹಿರಿಯರು, ಅನುಭವಶಾಲಿಗಳು, ಆಗಿದ್ದಾರೆ. ಈ ವಿಷಯ ಅವರಿಗೂ ಗೊತ್ತಿದೆ. ಇವತ್ತಿಗೂ ಕೂಡ ನಾನು ನೋಡುತ್ತಿದ್ದೇನೆ. ನಿಮ್ಮ ಮಂತ್ರಿಮಂಡಲದ ಸದಸ್ಯರೇ ಪೂರ್ತಿಯಾಗಿಲ್ಲ. ಅಂದ ಮೇಲೆ ಹೇಗೆ ಈ ಸದನವನ್ನು ನಡೆಸುತ್ತೀರಿ.

ಅಧ್ಯಕ್ಷರು:- ಅಂದ ಮೇಲೆ ಅವರೆಲ್ಲಾ ಯಾರು ಎಂದು ಗೊತ್ತು ಎಂದಾಯಿತಲ್ಲಾ, ತಾವು ಇಂಟ್ರಡಕ್ಷನ್ ಬೇಕು ಎನ್ನುತ್ತೀರಿ, ಅವರು ಇಲ್ಲವೆಂದು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಇಲ್ಲಿ ಖಾಲಿ ಇಟ್ಟಿರುವಂತಹ ಜಾಗಗಳನ್ನು 1, 2, 3, 4, 5 ಎಂದು ಇರುವುದನ್ನು ನೋಡಿದರೆ ಗೊತ್ತಿರುತ್ತದೆ. ಇದು ಪ್ರಸಿಡೆಂಟ್ ಕನ್‌ವೆನ್‌ಶನ್ ಇದೆಯೇ ಇಲ್ಲವೆಂದು ಹೇಳಿ. ಅದು ಇಲ್ಲವೆಂದು ಹೇಳಿ ನಾನು ಕೇಳುವುದಕ್ಕೆ ಹೋಗುವುದಿಲ್ಲ. ಇದು ನಗುವಂಥಾದ್ದು ಅಲ್ಲ.

Mr.SPEAKER:- I am not going into that aspect. ತಾವು ಏನು ಹೇಳಿದ್ದೀರಿ ಮಂತ್ರಿ ಮಂಡಲದ ಪರಿಚಯವಾಗಬೇಕೆಂದು ಒಂದು ಸಲ ಹೇಳಿದ್ದೀರಿ. ಮತ್ತೆ... ಮಂತ್ರಿಗಳು ಯಾರು ಇಲ್ಲವೆಂದು ಹೇಳುತ್ತೀರಿ. ಹಾಗಾಗಿ ಅವರು ಮಂತ್ರಿಗಳು ಯಾರು ಯಾರು ಎಂದು ತಮಗೆ ಗೊತ್ತಾಯಿತಲ್ಲಾ ಎಂದು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸದನದಲ್ಲಿ ಇರುವಂತಹ ಜಾಗಗಳು ಮೊದಲನೆ ಮತ್ತು ಎರಡನೆಯ ಸಾಲಿನಲ್ಲಿ ಮಂತ್ರಿಗಳಿಗೆ ಕೊಡುತ್ತಾರೆ. ಇದು ತಮಗೂ, ನಮಗೂ ಗೊತ್ತಿದೆ. ಮತ್ತೆ

ಎರಡನೆಯ ಸ್ಥಾನ ವಿರೋಧ ಪಕ್ಷದವರದು ಎಂದು ತಿಳಿದುಕೊಂಡಿದ್ದೇವೆ. ಆದರಲ್ಲಿ ಎರಡನೆಯದು ಡೆಪ್ಯೂಟಿ ಲೀಡರ್‌ಗೆ ಕೊಡುತ್ತಾರೆ. ಅದೇ ರೀತಿಯಲ್ಲಿ ಆ ಕಡೆಯೂ ಇದೆ. ಇದು ವಾಡಿಕೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಅವರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. 2, 3, 4, ಈ ಸ್ಥಾನಗಳಲ್ಲಿ ಸ್ವಲ್ಪ ವ್ಯತ್ಯಾಸಗಳಾದ ಮೇಲೆ ಒಂದೇ ಸಾರಿ ಅವರು ಪರಿಚಯ ಮಾಡಿಕೊಡಲಿ, ತಾವು ಏಕೆ ಅವಸರ ಮಾಡುತ್ತೀರಿ? ನಮಗಂತೂ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಯಾರು ಎಂದು ಗೊತ್ತಾಗಿದೆ. ಮೊದಲು ಪ್ರಮುಖ್ಯವಾದ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡೋಣ. ಮಾನ್ಯ ಪಟೇಲರು ಗಟ್ಟಿಯಾಗಿ ಕುಳಿತುಕೊಂಡ ಮೇಲೆ, ಅವರ ವ್ಯತ್ಯಾಸಗಳೆಲ್ಲಾ ಆದ ಮೇಲೆ ಒಂದೇ ಸಾರಿ ಇಂಟ್ರಡ್ಯೂಸ್ ಮಾಡಿಕೊಡಲಿ. ನಾವಂತೂ ಮುಖ್ಯಮಂತ್ರಿಗಳೆಂದು ಒಪ್ಪಿಕೊಂಡಿದ್ದೇವೆ. ಸಚಿವ ಸಂಪುಟ ಯಾವುದು ಎಂದು ಪತ್ರಿಕೆಗಳಲ್ಲಿ ಬಂತು ನಮಗೆ ಮನವರಿಕೆಯಾಗಿದೆ. ಆ ಪದ್ಧತಿಯನ್ನು ತೆಗೆದುಹಾಕೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ತಾವು ಹಾಗೆ ಬರುವುದಿಲ್ಲವೆಂದು ರೂಲಿಂಗ್ ಕೊಡಿ. ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು:- ಅವರು ಏನು ಹೇಳುತ್ತಾರೆಂಬುದನ್ನು ನಾವು ಕೇಳಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ವಿದ್ಯುಚ್ಛಕ್ತಿಯ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಾಗ ಕಾಂಗ್ರೆಸ್ ಮುಂಖಂಡರು ಮಂತ್ರಿಮಂಡಲದ ರಚನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ನಿಜ ಇದು ಒಂದು ಸಂಪ್ರದಾಯ, ನಾನು ಹಿಂದೆ ಕೂಡ ಹೊಸ ಮಂತ್ರಿಮಂಡಲವಾದಾಗ ಈ ಪ್ರಶ್ನೆಯನ್ನು ಪ್ರಾರಂಭ ಮಾಡಿದಾಗ ಏನು ಪರಿಚಯ ಮಾಡುವದೆಂದು ಎಲ್ಲ ಸುಮ್ಮನೆ ಕುಳಿತು ಬಿಟ್ಟರು. ಈ ವಿಷಯ ತಮಗೂ ಗೊತ್ತಿದೆ. ಇಲ್ಲಿರುವವರಿಗೂ ಜ್ಞಾಪಕ ಇದೆ. ಇವತ್ತು ಹಾಗೆ ಹೇಳುತ್ತಾರೆಂದು ನಾನು ಸುಮ್ಮನೆ ಕುಳಿತುಕೊಂಡೆ. ಮಾನ್ಯ ಪಟೇಲರು ಗೊತ್ತು, ಎಲ್ಲರೂ ಗೊತ್ತು, ಇದರ ಜೊತೆಗೆ ಕಾಂಗ್ರೆಸ್, ಜನತಾದಳದವರು ಒಟ್ಟಾಗಿ ಇದ್ದಾರೆ. ಆದುದರಿಂದ ಯಾರು ಮಂತ್ರಿಗಳು, ಯಾರು ಇಲ್ಲವೆನ್ನುವಂಥಾದ್ದು....

Sir . M.Mallikarjuna Kharge:- I am very sorry, if he makes such remarks then I also have to say. ಕೆಲವು ವಿಷಯಗಳಲ್ಲಿ ನೀವು ನಮ್ಮ ಜೊತೆಯಲ್ಲೆ ಇರುತ್ತೀರಿ. ನೀವು ಅದನ್ನು ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್:- ಈಗ ಕೇಂದ್ರ ಸರ್ಕಾರದಲ್ಲಿ ನೀವು ಹೇಳಿದ ಹಾಗೆ ನಡೆಯುತ್ತಿದೆ ಎಂಬ ಪ್ರಶ್ನೆ ಬೇರೆ ಅದರ ಬಗ್ಗೆ ಏನು? ವಾದವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವರು ಹೆಚ್ಚು ಮಾತನಾಡಿದರೆ ನನಗೂ ಮಾತನಾಡುವುದಕ್ಕೆ ಬರುತ್ತದೆ. ಕೆಲವು ಮಾತುಗಳನ್ನು ಯಾವಾಗ ಯಾವ ರೀತಿಯಲ್ಲಿ ಮಾತನಾಡಿದರೆ ಒಳ್ಳೆಯದೆಂದು ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಈ ಮಂತ್ರಿಮಂಡಲ ಇವರು ಮಾತುಕತೆಯಾಡಿಕೊಂಡು ರಚನೆಯಾಗಿರಬಹುದೆಂಬ ಭಾವನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಪ್ಪು ತಿಳಿದುಕೊಳ್ಳಬಾರದು.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ವಾಟಾಳ್ ನಾಗರಾಜ್‌ರವರು ಇರುವಂತಹ ವಿಚಾರವನ್ನು ಹೇಳಿದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರಿಗೆ ಏಕೆ ಸಿಟ್ಟು ಬರುತ್ತದೆಂಬುದು ನನಗೆ ಅರ್ಥವಾಗುತ್ತಿಲ್ಲ. ಜನತಾದಳ, ಕಾಂಗ್ರೆಸ್ ಒಂದಾಗಿರುವುದು ಈ ದೇಶಕ್ಕೆ ಗೊತ್ತಿದೆ. ಅವರು ಹೊಸದು ಏನು ಹೇಳಿದರು..?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾದರೂ ಸಹ ಶ್ರೀಮಾನ್ ನರಸಿಂಹರಾಯರ ಆಡಳಿತ ನಡೆಯುತ್ತಿರುವುದೆಂದು ಇಡೀ ದೇಶಕ್ಕೆ ಗೊತ್ತಿದೆ. ಇದು ಏನು ಹೊಸದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮ್ಮ ಸರ್ಕಾರ, ನಮ್ಮ ಪಕ್ಷ, ಏಕೆ ಬೆಂಬಲ ಕೊಟ್ಟಿದೆ ಎನ್ನುವಂಥಾದ್ದು ಈಗಾಗಲೇ ಬಹಿರಂಗವಾಗಿದೆ. ಇದು ಏನು ಮುಚ್ಚಿ ಇಟ್ಟಿಲ್ಲ. ಇವತ್ತಿನ ದಿವಸ ನೀವು ಬಹಳ ಗಾಬರಿ ಪಟ್ಟುಕೊಂಡು ಏನು ತಿಳಿದುಕೊಂಡಿದ್ದೀರಿ ಅದು ತಪ್ಪು. ಈ ದೇಶದಲ್ಲಿ ನಾವು ಸೆಕ್ಯೂಲರ್ ಪೊರ್ಸಸ್ಸ್ ಸಪೋರ್ಟ್ ಮಾಡುವುದಕ್ಕೋಸ್ಕರ ಮಾಡಿದ್ದೆ ಹೊರತು ನಿಮ್ಮಿಂದ ಪಾಠ ಹೇಳಿಸಿಕೊಳ್ಳುವುದಕ್ಕೆ ಮಾಡಿಲ್ಲ. ಯಾವುದು ಏನು ಏಕೆ ಎಂದು ಮಾಡಿಲ್ಲ.

ಅಧ್ಯಕ್ಷರು:- ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ...

(ಗೊಂದಲ)

ಶ್ರೀವಾಟಾಳ್ ನಾಗರಾಜ್:- ಅವರು ಪರಿಚಯ ಮಾಡಿಸುತ್ತೇನೆಂದರೆ ಮಾಡಿಸಲಿ, ಸಂತೋಷ, ಅದಕ್ಕೆ ನನ್ನ ಆಭ್ಯಂತರವೇನೂ ಇಲ್ಲ. ಮಂತ್ರಿಮಂಡಲದ ಪರಿಚಯವಾದ ಮೇಲೆ ಮುಖ್ಯವಾದ ವಿಚಾರವನ್ನು ಚರ್ಚೆಗೆ ತಮ್ಮನ್ನು ಕೇಳುತ್ತೇನೆ. ಅವರ ಪರಿಚಯದಿಂದ ಮೇಲೆ ತಾವು ಅವಕಾಶ ಕೊಡಿ.

(ಗೊಂದಲ)

★ **ಅಧ್ಯಕ್ಷರು:-** ನಾವು ಮೊದಲನೇ ದಿವಸ ಸೇರುತ್ತಿದ್ದೇವೆ. ನಿನ್ನೆ ಯಾವುದೇ ಕಾರ್ಯ ಕಲಾಪಗಳನ್ನು ನಡೆಸಿಲ್ಲ. ಸ್ವಲ್ಪ ಸೌಜನ್ಯದಿಂದ ಇರಬೇಕು, ಎನ್ನುವ ಕಾರಣಕ್ಕಾಗಿ ಸ್ವಲ್ಪ ನಿಯಮಾವಳಿಗಳನ್ನು ಪಕ್ಕಕ್ಕೆ ತಳ್ಳಿ ಕೆಲವು ವಿಚಾರಗಳನ್ನು ನೀವು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶವನ್ನು ಕೊಡುತ್ತಿದ್ದೇನೆ. ಅದನ್ನು ದಯಾಮಾಡಿ ಯಾರು ದೌರ್ಬಲ್ಯವೆಂದು ಭಾವಿಸಬೇಡಿ. I am very plain in certain matters.

ನಾವು ಇವತ್ತು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕಾಗಿತ್ತು. ಸಾಮಾನ್ಯವಾಗಿ ಪ್ರಶ್ನೋತ್ತರವನ್ನು ಬದಿಗೆ ತಳ್ಳಿ ಬೇರೆ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದು ಬಹಳ ಅಪರೂಪ ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಸದನದಲಿ ಎದ್ದು ನಿಂತು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಅಪೇಕ್ಷೆಪಟ್ಟಾಗ ನನ್ನ ಕರ್ತವ್ಯವು ಇದೆ. ಹಾಗೆಯೇ ಕಾಂಗ್ರೆಸ್ ಪಕ್ಷದ ಮುಂಖಿಡರು ಆದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ ಯವರು ಪಾಯಿಂಟ್ ಆಫ್ ಆರ್ಡರ್ ಅನ್ನು ಎತ್ತಿರುವಂಥಾದ್ದು ಅವರ ಆಕ್ಷೇಪ ಏನು ಇದೆ, ಅದು ಕೂಡ ಸರಿಯಾದಂಥದ್ದು ನಾನು ಅದನ್ನು ಮಾನ್ಯ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸಹೊದ್ಯೋಗಿಗಳ ಪರಿಚಯ

ಮಾಡಿಕೊಟ್ಟ ನಂತರ ಉಳಿದ ವಿಷಯಗಳನ್ನು ತೆಗೆದುಕೊಳ್ಳೋಣ. ಅದು ಬಿಟ್ಟು ನೀವು ಈಗಲೇ ಸರ್ಕ್ಯೂಲರ್, ದೇವೇಗೌಡರು, ವಿ.ಪಿ.ಸಿಂಗ್, ಎಂದು ಎಲ್ಲಾ ಚರ್ಚೆ ಮಾಡು ವಂಥಾದ್ದು ಸರಿಯಲ್ಲ. ನಾನು ತಮ್ಮಿಂದ ಏನು ಅಪೇಕ್ಷೆ ಪಡುತ್ತೇನೆಂದರೆ ನಾನು ಅಧ್ಯಕ್ಷನಾಗಿದ್ದರೂ ಕೂಡ ತಮಗಿಂತ ಕಡಿಮೆ ಸಮಯವನ್ನು ಈ ಸದನದಲ್ಲಿ ಕಳೆದಿರುವಂಥವನು, ತಾವುಗಳು ಹೆಚ್ಚು ಸಮಯವನ್ನು ಕಳೆದಿರುವಂಥವರು, ಆದುದರಿಂದ ತಾವೇ ಸ್ವಂತ ನಿಗ್ರಹದಿಂದ ನಡೆದುಕೊಳ್ಳುತ್ತೀರೆಂದು ನಾನು ಅಪೇಕ್ಷೆ ಪಡುತ್ತೇನೆ. ತಮಗೆ ಹೇಳುವಂತಹ ಸ್ಥಿತಿಗೆ ನನ್ನನ್ನು ತಳ್ಳಬೇಡಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. I request the Hon'ble Chief Minister to speak.

ಶ್ರೀ ಜೆ.ಹೆಚ್.ಪಟೀಲ್:- ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ತಮಗೆ ತಿಳಿಸಿದ್ದೆ. ಹೊಸ ಮಂತ್ರಿಮಂಡಲದಲ್ಲಿರುವವರೆಲ್ಲರ ಪರಿಚಯ ಮಾಡಿಸಲೇಬೇಕೆಂದು there is not rule like that. ಆದರೂ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಡಾ: ಎಂ.ಪಿ.ಕರ್ಕಿ:- ಖಾತೆಗಳು ಬದಲಾವಣೆಯಾಗಿದ್ದಾದರೂ ತಿಳಿಸಬೇಕಲ್ಲಾ...

ಶ್ರೀ ಜೆ.ಹೆಚ್.ಪಟೀಲ್:- ಕನ್‌ವೆನ್‌ಶನ್ ಏನೆಂದರೆ ಹೊಸ ಮಂತ್ರಿಗಳು ಈ ಸದನಕ್ಕೆ ಬಂದಾಗ ಅವರ ಪರಿಚಯ ಮಾಡುವುದು ಕನ್ವೆನ್‌ಶನ್ ಆದರೆ ತಮ್ಮಲ್ಲಿ ಒಂದು ವಿನಂತಿ ಏನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ವಿದ್ಯುಚ್ಚಕ್ತಿಯ ಬಗ್ಗೆ ಚರ್ಚೆಮಾಡಬೇಕೆಂದು ಇಚ್ಛೆಪಟ್ಟಿದ್ದಾರೆ. ನಾನು ಅದಕ್ಕೆ ತಯಾರಿದ್ದೇನೆ. ಆದರೆ ಪ್ರಶ್ನೋತ್ತರ ವೇಳೆಯನ್ನು ತೆಗೆದು ಹಾಕಿ ಮಂತ್ರಿಗಳ ಪರಿಚಯ ಮಾಡುವುದಿದ್ದರೆ ನಾನು ಸಿದ್ದನಿದ್ದೇನೆ.

Mr.SPEAKER:- I would only request the Hon'ble Chief Minister to introduce his cabinet colleagues. Rest leave it to me.

ಶ್ರೀ . ಜೆ.ಹೆಚ್.ಪಟೀಲ್(ಮುಖ್ಯಮಂತ್ರಿಗಳು): ಸಿದ್ದರಾಮಯ್ಯ , ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು, ಎಂ.ಪಿ.ಪ್ರಕಾಶ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಇವರು ದೆಹಲಿಗೆ ಹೋಗಿದ್ದಾರೆ. ಆರ್.ವಿ.ದೇಶಪಾಂಡೆ, ಬೃಹತ್. ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಪಿ.ಜಿ.ಆರ್.ಸಿಂಧ್ಯಾ, ಸಾರಿಗೆ ಸಚಿವರು, ಸಿ.ಬೈರೇಗೌಡ, ಕೃಷಿ ಸಚಿವರು, ಎಂ.ಸಿ.ನಾಣಯ್ಯ, ಕಾನೂನು ಸಂಸದೀಯ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು, ಹೆಚ್.ಜಿ.ಗೋವಿಂದ ಗೌಡ, ಪ್ರಾಥಮಿಕ ಮತ್ತು ಪ್ರೌಢ್ರ ಶಿಕ್ಷಣ ಸಚಿವರು, ರಮೇಶ್ ಸಿ.ಜಿಗಜಿನಗಿ , ಕಂದಾಯ ಸಚಿವರು, ತಿಪ್ಪೇಸ್ವಾಮಿ, ಸಣ್ಣ ನೀರಾವರಿ ಸಚಿವರು, ಹೆಚ್.ಸಿ. ಮಹದೇವಪ್ಪಾ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಎಸ್.ಎಸ್.ಪಾಟೀಲ್, ಸಹಕಾರ ಸಚಿವರು, ಎಸ್.ಡಿ.ಜಯರಾಮ್, ಗಣಿ ಮತ್ತು ಭೂವಿಜ್ಞಾನ ಸಚಿವರು, ಜಿ.ಬಸಣಪ್ಪ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು . . . .

ಶ್ರೀ.ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು):- ಮುಖ್ಯಮಂತ್ರಿಗಳೆ, ನಾವು ಸಹಕಾರ ಕೊಡುತ್ತೇವೆ, ಅಧ್ಯಕ್ಷರೆ ತಾವು ಒಂದು ನಿಮಿಷ ಅಪ್ಪಣೆ ಕೊಡಬೇಕು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಬ್ಬ ಅನುಭವಿ ರಾಜಕಾರಣಿಯಾಗಿ ಒಂದು ಮಾತನ್ನು ಹೇಳಿದರು. ನೂತನ ಮಂತ್ರಿಮಂಡಲವನ್ನು ಪರಿಚಯ ಮಾಡಿಕೊಡುವುದು ಸತ್ಸಂಪ್ರದಾಯ, ಹಿಂದೆ ಆಗಲಿಲ್ಲ ಅಲ್‌ರೈಟ್

ಮಾಡಲಿಲ್ಲ. ನಲವತ್ತೈದು ಜನರ ಈ ಗಜಗಾತ್ರದ ಮಂತ್ರಿಮಂಡಲದಲ್ಲಿ ನಮಗೆ ಯಾರು ಗೊತ್ತಿಲ್ಲ; ನೀವು ಪರಿಚಯ ಮಾಡಿಕೊಟ್ಟರೆ ನಾವು ಅವರ ಮುಖ ನೋಡಬೇಕು, ನಮಗೆ ಅವರು ಪರಿಚಯವಾಗಬೇಕು, ನಾಳೆ ಅವರನ್ನು ಸಂಪರ್ಕ ಮಾಡಲು ಅನುಕೂಲವಾಗಬೇಕು.

ಶ್ರೀ ಜೆ.ಹೆಚ್.ಪಟೀಲ್ :- ನೋಡಿದ್ದೀರಿ...

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರ್ಯಾರು ಇಲ್ಲಿ ಇಲ್ಲವೇ ಇಲ್ಲ ಸ್ವಾಮಿ...

Mr. J.H.PATEL:- They are not new faces. All are will known in the public life. ಅವರ್ಯಾರು ಹೊಸಬರಾಗಿ ಬಂದಿಲ್ಲ, ಎಲ್ಲರೂ ಸದನದಲ್ಲಿ ಇರತಕ್ಕಂಥವರೇ.

ಶ್ರೀ ಕೆ.ಎಸ್.ಈಶ್ವರಪ್ಪ:- ಎಂ.ಎಲ್.ಎ. ಆಗದಿದ್ದವರೂ ಕೂಡ ಮಂತ್ರಿಗಳಾಗಿದ್ದಾರೆ, ಅವರು ಯಾರು ಎನ್ನುವುದು ನಮಗೆ ಹೇಗೆ ಗೊತ್ತಾಗಬೇಕು.

ಶ್ರೀ ಜೆ.ಹೆಚ್.ಪಟೀಲ್:- ಹಾಗಾದರೆ, ಅವರೆಲ್ಲರನ್ನು ಕರೆಯಿಸಿದ ಮೇಲೆ ಪರಿಚಯ ಮಾಡಿಕೋಡೋಣ. ಈಗ ಅವರೆಲ್ಲರನ್ನು ಕರೆಯಿಸುತ್ತೇನೆ. ಆಮೇಲೆ ಪರಿಚಯ ಮಾಡಿಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಇದನ್ನು ಯಾವತ್ತೋ ಮಾಡುವುದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಸದನದಲ್ಲಿ ಇರಬೇಕು ನೀವು ಅವರನ್ನು ಪರಿಚಯ ಮಾಡಿಕೊಡಬೇಕೆಂದು ಇದೆ.

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಕೌನ್ಸಿಲ್ ನಡೆಯುತ್ತಿದೆ. ಅವರು ಅಲ್ಲಿಗೆ ಹೋಗಿರಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಏನಾಗಿದೆ ಎಂದರೆ, ನಲ್ವತ್ತೈದು ಮಂತ್ರಿಗಳಲ್ಲಿ, ಸ್ವಲ್ಪ ಕೇಳಿ ಇದು ಆದ ಮೇಲೆ ಅಲ್ಲಿಗೆ ಹೋಗಬೇಕು. ಸುಮ್ಮನೆ ನೀವು ಅದನ್ನು ಹೇಳಿಕೊಂಡು ಹೋದರೆ.... ನಲವತ್ತೈದು ಮಂತ್ರಿಗಳಲ್ಲಿ ಶೇಕಡ ಐವತ್ತಕ್ಕಿಂತ ಹೆಚ್ಚು ಮಂತ್ರಿಗಳು ಗೈರು ಹಾಜರಿದ್ದರೂ ನೀವು ಪರಿಚಯ ಮಾಡಿಕೊಡುತ್ತೇನೆಂದರೆ, ಇದು ಏನು?

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಒಂದು ಅನುಮಾನ ಏನು ಬರುತ್ತದೆಂದರೆ....

ಅಧ್ಯಕ್ಷರು:- ದಯಮಾಡಿ ತಾವು ಮುಂದುವರೆಸಿ, ಪೂರ್ತಿ ಮಾಡಿ....

ಶ್ರೀ ಜೆ.ಹೆಚ್. ಪಟೀಲ್:- ನಾನು ಹೆಸರುಗಳನ್ನು ಹೇಳಿ ಇಲಾಖೆಗಳನ್ನು ಹೇಳಿಬಿಡುತ್ತೇನೆ. ಕೆ.ಎಂ.ಕೃಷ್ಣರೆಡ್ಡಿ, ಸಮಾಜ ಕಲ್ಯಾಣ ಸಚಿವರು, ಕೆ.ಎಸ್.ನಾಗೇಗೌಡ, ಬೃಹತ್ ನೀರಾವರಿ ಸಚಿವರು, ಎಂ.ಎಸ್.ಪಾಟೀಲ್, ಜವಳಿ ಸಚಿವರು, ಬಿ.ಎಸ್.ಬಚ್ಚೇಗೌಡ, ನಗರಾಭಿವೃದ್ಧಿ ಸಚಿವರು, ಬಿ.ಸೋಮ ಶೇಖರ್, ಉನ್ನತ ಶಿಕ್ಷಣ ಸಚಿವರು, ಬಿ.ಎ.ಮೊಯಿದ್ದೀನ್, ಸಣ್ಣ ಕೈಗಾರಿಕಾ ಸಚಿವರು, ಉಮೇಶ್ ಕಟ್ಟಿ, ಸಕ್ಕರೆ ಸಚಿವರು, ಸಿ.ಎಂ.ಉದಾಸಿ, ಲೋಕೋಪಯೋಗಿ ಸಚಿವರು, ಎಂ.ವಿ.ಗುತ್ತೇದಾರ್ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಹೆಚ್.ಡಿ.ರೇವಣ್ಣ, ವಸತಿ ಸಚಿವರು, ಕೆ.ಬಿ.ಶಾಣಪ್ಪ, ಅಬಕಾರಿ ಸಚಿವರು. ರಾಜ್ಯ ಸಚಿವರು - ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಆರ್.ರೋಷನ್‌ಬೇಗ್, ಮುಖ್ಯಮಂತ್ರಿಗೆ ಹೊಂದಿಕೊಂಡಂತೆ ಗೃಹ ಮತ್ತು ವಕ್ಫ್ ಸಚಿವರು, ಡಿ.ಟಿ.ಜಯಕುಮಾರ್, ತೋಟಗಾರಿಕಾ ಸಚಿವರು,

ಅಜಯ್‌ಕುಮಾರ್ ಸರ್‌ನಾಯಕ್, ಯುವಜನಸೇವೆ ಮತ್ತು ಕ್ರೀಡಾ ಸಚಿವರು, ಬಿ.ಮುನಿಯಪ್ಪ ಮುದ್ದಪ್ಪ, ಮುಜರಾಯಿ ಸಚಿವರು, ಮೀರಾಜುದ್ದೀನ್ ಪಾಟೀಲ್, ಪೌರಾಡಳಿತ ಸಚಿವರು (ಸ್ವತಂತ್ರ ಪ್ರಭಾರ), ಕೆ.ಜಯಪ್ರಕಾಶ್ ಹೆಗ್ಡೆ, ಮೀನುಗಾರಿಕೆ ಮತ್ತು ಪಶುಸಂಗೋಪನಾ ಸಚಿವರು, ಆನಂತ್‌ನಾಗ್, ಬೆಂಗಳೂರು ನಗರಾಭಿವೃದ್ಧಿ ಸಚಿವರು, ಶರಣಪ್ಪ ಬಸಪ್ಪ ದರ್ಶನಾಪುರ್....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೆ.ಜಯಪ್ರಕಾಶ್ ಹೆಗ್ಡೆಯವರು ಪಶುಸಂಗೋಪನಾ ಸಚಿವರೆಂದು ಓದುತ್ತಿದ್ದೀರಿ, ಪಾಪ ಪಶುಸಂಗೋಪನಾ ಸಚಿವರಾದ ಬಿ.ಬಿ.ನಿಂಗಯ್ಯನವರ ಗತಿಯೇನು?

ಶ್ರೀ ಜೆ.ಹೆಚ್.ಪಟೇಲ್:- ಶರಣಪ್ಪ ಬಸಪ್ಪ ದರ್ಶನಾಪುರ್, ಮುಖ್ಯಮಂತ್ರಿಗೆ ಹೊಂದಿಕೊಂಡಂತೆ ಇಂಧನ ಸಚಿವರು, ಬಿ.ಸತ್ಯನಾರಾಯಣ, ಕಾರ್ಮಿಕ ಸಚಿವರು, ಹೆಚ್.ನಾಗಪ್ಪ, ಕೃಷಿ ಮಾರುಕಟ್ಟೆ ಸಚಿವರು, ಆರ್.ಕೃಷ್ಣಪ್ಪ, ವಯಸ್ಕರ ಶಿಕ್ಷಣ ಸಚಿವರು, ಬಿ.ಬಿ.ನಿಂಗಯ್ಯ, ಪಶುಸಂಗೋಪನಾ ಸಚಿವರು, ವಿ.ಸೋಮಣ್ಣ, ಬಂಧಿಖಾನೆ ಮತ್ತು ಗೃಹ ರಕ್ಷಕದಳ ಸಚಿವರು, ಎಂ.ಪರದೇಗೌಡ, ರೇಷ್ಮೆ ಸಚಿವರು, ಡಾ: ಎಂ.ಶಂಕರ್‌ನಾಯಕ್, ವೈದ್ಯಕೀಯ ಶಿಕ್ಷಣ ಸಚಿವರು, ಕೆ.ವೆಂಕಟೇಶ್, ಪ್ರದೇಶಾಭಿವೃದ್ಧಿ ಮತ್ತು ಕಾಡಾ ಸಚಿವರು, ಶ್ರೀಮತಿ ವಿಮಲಾ ಬಾಯಿ ದೇಶ್ ಮುಖ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು, ಶಿವಣ್ಣನವರ್ ಬಸವರಾಜ್ ನೀಲಪ್ಪ, ತಂತ್ರಜ್ಞಾನ ಪರಿಸರ ಮತ್ತು ಅಸಂಪ್ರದಾಯಿಕ ಇಂಧನ ಸಚಿವರು.

ಅಧ್ಯಕ್ಷರು:- ಈಗ ಪ್ರಶ್ನೋತ್ತರ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೆ, ಒಂದು ನಿಮಿಷ, ತಾವು ನೋಡಿದ್ದೀರಿ ನಮಗೆ ಈ ರೀತಿ ಸಹಕಾರ ತಾವು ಕೊಡುತ್ತೀರಿ. ನಾವು ನಿಮಗೆ ಸಹಕಾರ ಕೊಡುತ್ತೇವೆ. ಒಂದು ಸಂದರ್ಭದಲ್ಲೂ ನಿಮ್ಮ ಮನಸ್ಸಿಗೆ ನೋವಾಗುವಂತೆ ನೆಡೆದುಕೊಂಡಿಲ್ಲ.

ಅಧ್ಯಕ್ಷರು:- ನಾನು ಅಧರಿಸಿರುವುದೇ ನಿಮ್ಮ ಸಹಕಾರದ ಮೇಲೆ...

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಒಂದು ಸಂದರ್ಭದಲ್ಲೂ ನಿಮ್ಮ ಮನಸ್ಸಿಗೆ ನೋವಾಗುವಂತೆ ನೆಡೆದುಕೊಂಡಿಲ್ಲ. ಇದೊಂದು ವಿಶೇಷ ಸಂದರ್ಭ ದಯಮಾಡಿ ತಾವು ಅದನ್ನು ತೆಗೆದು ನೋಡಿ, ಹಿಂದೆ ಇದ್ದಂಥ ಸಭಾಧ್ಯಕ್ಷರ ಕಾಲದಲ್ಲಿ ಇಂತಹ ವಿಶೇಷ ಸಂದರ್ಭ ಬಂದಾಗ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ಪೂರ್ಣ ಸಹಕಾರ ನಿಮ್ಮ ಜೊತೆಗೆ ಇದೆ. ದಯಮಾಡಿ ಇದೊಂದು ಬಾರಿ ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ, ನಾವು ವಿದ್ಯುತ್ ದರ ಏರಿಕೆಯ ಬಗ್ಗೆ ಏನು ನಿಲುವಳಿ ಸೂಚನೆಯನ್ನು ತಂದಿದ್ದೇವೆ ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

★ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಈಗ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸಚಿವ ಸಂಪುಟದ ಪಟ್ಟಿಯನ್ನು ಓದಿದರು. ಈ ಪಟ್ಟಿಯಲ್ಲಿರುವ ಮಂತ್ರಿಗಳು ಯಾರ್ಯಾರು ಎಂದು ನಮಗೂ ಹಾಗೂ ಹೊರಗಡೆ ಎಲ್ಲಾ ಗೊತ್ತಿದೆ. ಇದರ ಉದ್ದೇಶವೇನೆಂದರೆ, ಅವರು ಪರಿಚಯವಾಗಲಿ ಎನ್ನುವುದು. ಆದುದರಿಂದ ನಾನು ಅವರನ್ನು ತೀರ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಬರಲಿ, ಅವರು ಬಂದಾಗ ಪರಿಚಯ ಮಾಡಿ ಕೊಡಲಿ. ಅವರು ಪರಿಚಯವಾಗಲಿ ಎನ್ನುವುದು ಒಂದೇ

ಹೊರತು, ಈಗ ನಮಗೆ ಬಹಳ ಜನ ಪರಿಚಯವಾಗಲಿಲ್ಲ, ಖಂಡಿತಾ ಪರಿಚಯವಾಗಲಿಲ್ಲ. ಅವರು ಏನು ಓದಿದರು ಅದು ನಮಗೂ ಗೊತ್ತಿತ್ತು. ಆದುದರಿಂದ ಇದಕ್ಕೋಸ್ಕರ ಒತ್ತಾಯ ಮಾಡುವ ಅವಶ್ಯಕತೆ ಇರಲಿಲ್ಲ ಅದನ್ನು ಬಿಟ್ಟುಬಿಡೋಣ. ಸ್ವಾಮಿ, ತಮ್ಮಲ್ಲಿ ಇವತ್ತು ಒಂದು ಬಹಳ ಅತ್ಯಂತ ಪ್ರಾಮುಖ್ಯವಾಗಿರತಕ್ಕಂಥ ವಿಚಾರವೇನೆಂದರೆ ನಾವು ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ವಿದ್ಯುಚ್ಛಕ್ತಿಯ ಬಗ್ಗೆ ಮತ್ತು ಕೇಂದ್ರ ಸರ್ಕಾರ ಪೆಟ್ರೋಲ್ ಡಿಸೇಲ್, ಅನಿಲ ಅವೆಲ್ಲದರ ಬೆಲೆಯನ್ನು ಹೆಚ್ಚಿಗೆ ಮಾಡಿದ್ದಾರೆ. ಇದರ ವಿರುದ್ಧ ನಾವು ರಾಜ್ಯಾದ್ಯಂತ ತೀವ್ರವಾಗಿ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ, ಬಿ.ಜೆ.ಪಿ.ಯವರು ಮೂರನೆಯ ತಾರೀಖಿನಂದು ಬಂದ್ ಆಚರಿಸಿದ್ದರೆ. ಹಾಗೆ ಹದಿನೈದನೇ ತಾರೀಖಿನಂದು ಎಲ್ಲಾ ಸರ್ವಪಕ್ಷದವರು ಬಂದ್ ಆಚರಿಸುತ್ತಿದ್ದಾರೆ. ಇದೆಲ್ಲಾ ಇನ್ನೂ ಅನೇಕ ವಿಚಾರಗಳಿವೆ. ಸರ್ಕಾರ ಏಕಾಏಕಿ ಶಾಸನ ಸಭೆಯನ್ನು ಮುಂದಿಟ್ಟುಕೊಂಡು ಅದನ್ನು ಏರಿಸಿ ಇರುವುದು ಇದೆಲ್ಲಾ ಚರ್ಚೆಯಾಗಬೇಕಾಗಿದೆ. ಆದುದರಿಂದ ತಮ್ಮಲ್ಲಿ ನಾವು ಏನು ಅರಿಕೆ ಮಾಡಿಕೊಳ್ಳುತ್ತೇವೆಂದರೆ, ಈ ಒಂದು ಪ್ರಶ್ನೋತ್ತರ ಕಾಲವನ್ನು ರದ್ದು ಪಡಿಸಿ ಈ ಚರ್ಚೆಯನ್ನೇ ನೇರವಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಸ್ವಾಮಿ.

3) ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ:

ವಿಷಯ: ವಿದ್ಯುತ್ ದರ, ಪೆಟ್ರೋಲ್, ಡೀಸೆಲ್ ಅನಿಲ ಇವೆಲ್ಲವುಗಳ ಬೆಲೆಯನ್ನು ಹೆಚ್ಚಿಸಿರುವುದು.

★ **ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್):-** ನಾವು ಕೂಡ ಇದರ ಬಗ್ಗೆ ಒಂದು ನಿಲುವಳಿಸೂಚನೆಯನ್ನು ನಿನ್ನೆ ಕಳುಹಿಸಿದ್ದೇವೆ. ಈ ವಿದ್ಯುಚ್ಛಕ್ತಿ ದರವನ್ನು ಏನು ಹೆಚ್ಚಿಸಿದ್ದಾರೆ ಇದನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಕೇಳಿದ್ದೇವೆ. ಬಹಶ: ತಾವು ಇದನ್ನು ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳುತ್ತೀರೆನ್ನುವ ವಿಶ್ವಾಸವಂತು ನಮಗಿದೆ. ಏಕೆಂದರೆ ಈ ವಿಷಯದ ಗಹನತೆಯನ್ನು ಅರಿತುಕೊಂಡರೆ, ಇದರ ಶಕೆ ಜಾಸ್ತಿ ಯಾರಿಗೆ ಬಡಿಯಿತು ಎಂದರೆ, ನಮ್ಮ ಕೋಲಾರ ಜಿಲ್ಲೆಗೆಯವರಿಗೆ ಏಕೆಂದರೆ, ಅಲ್ಲಿರತಕ್ಕಂಥ ರೈತರು ಬಳಕೆ ಮಾಡುವಂತಹ ವಿದ್ಯುತ್ ಪಂಪ್‌ಸೆಟ್ ಗಳಿಂದ ಅಂಡರ್‌ಗ್ರೌಂಡ್ ವಾಟರ್ ಅನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥದ್ದು ಹೆಚ್ಚಿನ ಪಂಪ್‌ಸೆಟ್ಟುಗಳು ಇರತಕ್ಕಂಥ ಜಿಲ್ಲೆ ಯಾವುದೆಂದರೆ, ಅದು ನಮ್ಮ ಕೋಲಾರ ಜಿಲ್ಲೆ. ಆದ್ದರಿಂದಲೇ ಅಧ್ಯಕ್ಷರೆ, ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ ಬೇಕಾದರೆ ಮಧ್ಯಾಹ್ನದ ಮೇಲೆ ಈ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಈಗ ಇದು ಮಹತ್ವವಿರುವ ಕಾರಣ ನೀವು ಇದಕ್ಕೆ ಸ್ವಲ್ಪ ಆದ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾವು ಕೂಡ ಅನೇಕ ಪ್ರಶ್ನೆಗಳನ್ನು ಕೇಳುವುದಕ್ಕಾಗುತ್ತದೆ. ಕ್ಲಾರಿಫೈ ಮಾಡಿಕೊಳ್ಳುವುದಕ್ಕಾಗುತ್ತದೆ. ಯಾವ ದೃಷ್ಟಿಯಿಂದ ಅವರು ಹೆಚ್ಚಿಸಿದರು. ಯಾವ ಕಾರಣಕ್ಕಾಗಿ ಮಾಡಿದರು, ಏನು ಅಂತಹ ಒತ್ತಡ ಬಂತು, ಅವರಿಗೆ ಸಮಯ ಇರಲಿಲ್ಲವೇ ಎನ್ನತಕ್ಕಂಥದ್ದನ್ನು ನಾವು ನೋಡಬೇಕು. ಏಕೆಂದರೆ, ನಾವು ಸುಮ್ಮನೆ ಮನಸ್ಸು ಬಂದಾಗ ಏರಿಸುವುದು, ಆಮೇಲೆ ಇದಾಯಿತು ನಾವು ಮಾಡಿದ್ದೇವೆ. ಏನು ಮಾಡಿಕೊಳ್ಳುತ್ತಿರೋ ಮಾಡಿಕೊಳ್ಳಿ ಎಂದು ಅವರು ಹೇಳುವುದು. ಹಳ್ಳಿಯಿಂದ ದಿಲ್ಲಿಯವರೆಗೆ ನಿಮ್ಮ ಸರ್ಕಾರವಿದ್ದರೆ ಇಲ್ಲಿ ನೀವು ವಿದ್ಯುಚ್ಛಕ್ತಿಯ ದರವನ್ನು ಏರಿಸುತ್ತೀರಿ, ದಿಲ್ಲಿಯಲ್ಲಿ ಅವರು ಪೆಟ್ರೋಲ್ ದರವನ್ನು ಏರಿಸಿಬಿಟ್ಟರು, ಮಾತನಾಡಿಕೊಂಡು ಏರಿಸುತ್ತಿರೇನೋ